ಶ್ರೀ ವಾಟಾಳ್ ನಾಗರಾಜ್ : ಬರೀ ಕೇಂದ್ರಕ್ಕೆ ಪ್ರಾರ್ಥನೆ ಮನವಿ ಸಲ್ಲಿಸುವುದು ಆಗಿದೆಯೇ ಹೊರತು 90ರಿಂದ ಇಲ್ಲಿಯವರೆಗೂ ಇವರ ಮನವಿಗೆ ಕೇಂದ್ರ ಬೆಲೆ ಕೊಟ್ಟಿಲ್ಲ. ಕಂದಾಯ ಸಚಿವರ ಮೇಲೆ ನನಗೆ ಬಹಳ ಗೌರವ ಇದೆ, ಏಕೆ ಈ ಸದನಲ್ಲಿ ನೀವು ದಾರಿ ತಪ್ಪಿಸಿಕೊಂಡು ಹೋಗುತ್ತಿದ್ದೀರಿ? ಅದು ಒಳ್ಳೆಯದಲ್ಲ, ನೇರ ಹೇಳಿಬಿಡಿ. ಬರುವುದಾದರೆ ಕೇಂದ್ರದಿಂದ ಬರುತ್ತದೆ ಇಲ್ಲ ಎನ್ನಿ ಸುಮ್ಮನೆ ಬರುತ್ತದೆ, ಆಸೆ ಇದೆ, ಅವರಿಗೆ ಅಭಿಮಾನ ಇದೆ ಕೊಡುತ್ತಾ ಇದ್ದಾರೆ ಎಂಬುದರಿಂದ ನಮಗೇನೂ ಅನುಕೂಲವಾಗುವುದಿಲ್ಲ. ನೇರವಾಗಿ ಉತ್ತರ ಕೊಡಿ 90ರಿಂದ ಇಲ್ಲಿಯವರೆಗೆ ಬರದೇ ಇರುವಾಗ ಈಗ ಹೇಗೆ ಬರುತ್ತದೆ. ಹೇಳಿ ಸ್ವಾಮಿ

ಶ್ರೀ ಧರ್ಮಸಿಂಗ್ : ನೇರವಾಗಿ ಹೇಳಬೇಕಾದರೆ 90-92,92-93,93-94ರಲ್ಲಿ ಏನು ಮನವಿ ಸಲ್ಲಿಸಿದ್ದೇವೆ ನಮಗೆ ಹಣಬಂದಿಲ್ಲ. ಅವರು ಹೇಳುವ ಸಿಆರ್ಎಫ್ನಲ್ಲಿ 27.5 ಕೋಟಿಯಿಂದ ಮಾಡಬೇಕೆಂದಿದ್ದಾರೆ. ಈಗ ವಾಟಾಳ್ನಾಗರಾಜ್ರವರಿಗೆ ಇಷ್ಟೇ ಹೇಳಬಯಸುತ್ತೇನೆ. ಈ ಪರಿಶೀಲನೆ ಮಾಡುವ ಎಂಬ ನೇರ ಆಶ್ವಾಸನೆ ಕೊಟ್ಟಿದ್ದಾರೆ, ಸಿಗುವ ಆಸೆ ಕೂಡ ಇದೆ. ಏಕೆಂದರೆ ಪ್ರಧಾನ ಮಂತ್ರಿಗಳು ಮೊನ್ನೆ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದಾರೆ, ನಾವು ಭೇಟಿಯಾದಾಗ, ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ, ಆದ್ದರಿಂದ ಸಿಗುವ ಭರವಸೆ ಇದೆ.

ಪ್ರಶ್ನೆ ಸಂಖ್ಯೆ 133 - ಶ್ರೀ ಪ್ರತಾಪಚಂದ್ರ ಶೆಟ್ಟಿ

ಶ್ರೀ ಧರ್ಮಸಿಂಗ್ : ಇದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಬರುತ್ತದೆ

ಅಧ್ಯಕ್ಷರು : ಈ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

**ವಿಷಯ : ಕನಕಪುರ-ಮುಳುಬಾಗಿಲು ಮುಂತಾದ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 134(597)

ಶ್ರೀ ಸಿ. ಬೈರೇಗೌಡ (ವೇಮಗಾಲ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ, ಆನೇಕಲ್ ಹೊಸಕೋಟೆ ಮಾಲೂರು, ಕೋಲಾರ, ಬಂಗಾರಪೇಟೆ,ಮುಳಬಾಗಿಲು ಮುಂತಾದ ಪಟ್ಟಣಗಳಿಗೆ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯ ಅಂದಾಜೊಂದನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ತಯಾರಿಸಿರುವುದು ನಿಜವೇ?

ಆ) ಈ ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರ ತತ್ವಷ ಒಪ್ಪಿರುವುದೆ?

ಇ) ಈ ದಿಕ್ಕಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ಯೋಜನೆ ಬಗ್ಗೆ ಹಿಂದೆ ಮಾಡಿದ್ದ ಅಂದಾಜು ಮತ್ತು ಈಗಿನ ಅಂದಾಜು ಎಷ್ಟು ?

ಶ್ರೀ ಸಿ. ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಒಂದು ರೇಖಾ ಅಂದಾಜನ್ನು 1983ನೇರಲ್ಲಿ ತಯಾರಿಸಲಾಗಿತ್ತು.

ಆ) - ಇಲ್ಲ -

ಇ) ಉದ್ಭವಿಸುವುದಿಲ್ಲ

ಈ) 1983 ಸಾಲಿನ ದರದನ್ವಯ 100 ಕೋಟಿ. ಈಗಿನ ದರದಲ್ಲಿ ಸುಮಾರು 400 ಕೋಟಿ ರೂ.ಗಳು ಆಗಬಹುದು.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ಈ ಪ್ರಶ್ನೆಯನ್ನು ಮೂರನೆಯ ಬಾರಿಗೆ ನಾನು ಕೇಳುತ್ತಿದ್ದೇನೆ, ಈ ಸದನದಲ್ಲಿ ಒಂದು ಹಂತದಲ್ಲಿ ಈ ಯೋಜನೆಯನ್ನು ಇನ್‌ವೆಸ್ಟಿಗೇಟ್ ಮಾಡಲು ಒಂದು ಉಪವಿಭಾಗವನ್ನು ತೆರೆದು ರೇಖಾ ಅಂದಾಜನ್ನು ತಯಾರು ಮಾಡಿದ್ದೇವೆ ಎನ್ನುತ್ತಾರೆ. ಅದಕ್ಕೆ ಬದಲಾಗಿ ವಿವರವಾದ ಅಂದಾಜು ತಯಾರಿಸುವುದಕ್ಕಾಗಿ ಒಂದು ಉಪ ವಿಭಾಗ ತೆರೆದು ಪ್ರಯತ್ನ ಮಾಡಿ ಅದರ ಸಾಧಕಭಾಧಕಗಳನ್ನು ಆಲೋಚನೆ ಮಾಡಿ ಎಂದು ಸಲಹೆ ಕೊಟ್ಟಿದ್ದೆ. ಅದನ್ನು ತಾತ್ವಿಕವಾಗಿ ಒಪ್ಪಿದ್ದರು ಮತ್ತು ಮುಖ್ಯಮಂತ್ರಿಗಳೂ ಸಹ ಹೊರಗಡೆ ಆಶ್ವಾಸನೆ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದರೂ ಮೂರನೇ ಬಾರಿ ಪ್ರಶ್ನೆ ಕೇಳಿದರೂ ಪ್ರಥಮ ಬಾರಿಗೆ ಏನು ಉತ್ತರ ಕೊಟ್ಟಿದ್ದರೋ ಅದೇ ಉತ್ತರ ಇವತ್ತಿಗೂ ಕೊಡುತ್ತಾರೆ. ಕೊನೇಪಕ್ಷ ಇದನ್ನು ಬದಲಿಸಿ ಒಂದು ವಿವರವಾದ ಅಂದಾಜು ಪಟ್ಟಿ ತಯಾರಿಸಲು ಮತ್ತು ವಿವರವಾದಂಥ ಒಂದು ಇನ್‌ವೆಸ್ಟಿಗೇಷನ್ ಮಾಡಲು ಹಾಗೂ ಇದು ಆಗುತ್ತದೋ ಬಿಡುತ್ತದೋ ಎಂಬ ಸಾಧಕಬಾಧಕಗಳನ್ನು ನೋಡುವ ಪ್ರಯತ್ನವನ್ನಾದರೂ ನಡೆಸುತ್ತೀರಾ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಈಗಾಗಲೇ ಉತ್ತರ ಒದಗಿಸಿದ್ದೇವೆ. ಇದರ ಬಗ್ಗೆ ಒಂದು ರೇಖಾ ಅಂದಾಜು ತಯಾರಿಸಿದ್ದು 1983 ರಲ್ಲಿ, ಅನಂತರ ಈ ಯೋಜನೆಯನ್ನು ಕಾರ್ಯಗತ ಮಾಡಲು, ಮಾನ್ಯ ಸದಸ್ಯರು ಹೇಳಿದ ಹಾಗೆ ಅನೇಕ ಬಾರಿ ಮುಖ್ಯಮಂತ್ರಿಗಳೂ ಭರವೆಸೆ ಕೊಟ್ಟಿದ್ದಾರೆ. ಆದರೆ ಈ ಯೋಜನೆ ಪೂರೈಸಲು 100 ಕೋಟಿ ಅಂದಾಜನ್ನು 83ರಲ್ಲಿ ತಯಾರಿಸಿದ್ದೆವು. ಈಗ ಈ ಯೋಜನೆ ಹಮ್ಮಿಕೊಳ್ಳಲು ಸರ್ಕಾರದ ಅರ್ಥವ್ಯವಸ್ಥೆ ವಿಚಾರ ಸದಸ್ಯರಿಗೆ ಗೊತ್ತಿರುವುದರಿಂದ ಇವತ್ತಿನ ಅಂದಾಜಿನ ಪ್ರಕಾರ 400 ಕೋಟಿ ರೂಗೆ ಅಂದಾಜು ತಯಾರಿಸುವ ಹಂತದಲ್ಲಿದ್ದೇವೆ. ಇದನ್ನು ತಯಾರಿಸಲು ನಮ್ಮ ಇಲಾಖೆ ಅಧಿಕಾರಿಗಳು ಆಗಲೇ ಸಿದ್ಧವಾಗಿದ್ದಾರೆ. ಮುಂದಿನ ದಿನಗಳಲ್ಲಿ ಅಂದಾಜುಪಟ್ಟಿ ತಯಾರಾದ ನಂತರ ಸಚಿವಸಂಪುಟಕ್ಕೆ ತಂದು ಇದರ ಒಪ್ಪಿಗೆ ಪಡೆದು ಈ ಯೋಜನೆ ಪೂರೈಸುವ ಕೆಲಸ ಮಾಡುತ್ತೇವೆಂಬ ಆಶ್ವಾಸನೆ ಕೊಡುವ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ : 100 ಕೋಟಿ ಇದ್ದದು 400 ಕೋಟಿ ಆಗಬಹುದೆನ್ನುತ್ತಾರೆ. ಅದೂ ಸಹ ಕರಾರ್‌ವಾಕ್ಯಾಗಿಲ್ಲ. ಅದೂ ಕೂಡ ಇವರ ರೇಖಾ ಅಂದಾಜೇ 400 ಕೋಟಿ ರೂ. ಅದಕ್ಕಾಗಿಯೇ ವಾಸ್ತವಿಕವಾಗಿ ಟೆಕ್ನಿಕಲ್ ಫೀಸಿಬಿಲಿಟಿ ನೋಡುಬೇಕಾಗುತ್ತದೆ. ಅದನ್ನು ಮಾಡಿ ಎಂಬುದು ನನ್ನ ಆಗ್ರಹ. ಅದಕ್ಕೆ ನನಗೆ ಉತ್ತರ ಕೊಡಿ. ಮುಖ್ಯಮಂತ್ರಿಗಳ ಆಗಲೇ ಇದಕ್ಕೆ ಮಾಡಿಸುತ್ತೇವೆಂದು ಅಶ್ವಾಸನೆ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳ ಆಶ್ವಾಸನೆ ಇಲ್ಲಿಯವರೆಗೆ ಕಾರ್ಯಗತವಾಗಿಲ್ಲ. ಅದನ್ನು ದಯವಿಟ್ಟು ಮಾಡಿಸುತ್ತೀರಾ?

ಶ್ರೀ ಸಿ. ಆರ್. ಸಗೀರ್ ಅಹಮದ್ : ನಾನು ಉತ್ತರದಲ್ಲಿ ಹೇಳಿದ್ದೇನೆ, 83ರಲ್ಲಿ ಇದ್ದ 100 ಕೋಟಿ ಈಗಿನ ದರದಲ್ಲಿ ಸುಮಾರು 400 ಕೋಟಿ ಆಗಬಹುದೆಂದು. ಆದ್ದರಿಂದ ಇವರು ಪ್ರಶ್ನೆ ಹಾಕಿದ ತಕ್ಷಣ ನಮ್ಮ ಇಲಾಖೆ ಅ ಅಧಿಕಾರಿಗಳಿಂದ ನಾನು ಎಲ್ಲಾ ಕಡತ ಪರಿಶೀಲಿಸಿದ್ದೇನೆ. ಸದ್ಯಕ್ಕೆ ಪೂರ್ತಿ ಅಂದಾಜಿಗೆ ನಮ್ಮ ಇಲಾಖೆ ವತಿಯಿಂದ ಏನೇನು ಮಾಡಬೇಕೋ ಅದೆನ್ನೆಲ್ಲಾ ಮಾಡಲು ಆದೇಶವನ್ನು ಕೊಟ್ಟು ಮುಂದಿನ ಸಂದರ್ಭದಲ್ಲಿ ವಿವರಗಳನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಉಪವಿಭಾಗ ತೆರೆದು ಇನ್‌ವೆಸ್ಟಿಗೇಷನ್ ಮಾಡಿಸುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ. ಮುಂಜೂರಾತಿ ಕೊಡುವ ದಿಸೆಯಲ್ಲಿ ಪ್ರಥಮ ಹೆಜ್ಜೆ ಇಡಲು ನೀವು ತಯಾರಿಲ್ಲ. ಅದಕ್ಕಾಗಿ ಟೆಕ್ನಿಕಲ್ ಫೀಸಿಬಿಲಿಟಿ ನೋಡಲು ಒಂದು ಉಪವಿಭಾಗ ತೆರೆಯಿರಿ. ಇದಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ :- ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಆರ್ಥಿಕ ಸ್ಥಿತಿಯನ್ನು ನೋಡಿಕೊಡು ಕೆಲಸ ಮಾಡಬೇಕಾಗಿದೆ. ನಾನು ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :- ಇಲ್ಲಿ, ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ಅಧ್ಯಕ್ಷರಾದ ಶ್ರೀ ಸಿ.ಎಂ. ಲಿಂಗಪ್ಪನವರು ಈ ಸದನದ ಸದಸ್ಯರಾಗಿದ್ದಾರೆ. ಅವರುಇದರ ಸಂಬಂಧವಾಗಿ ಶಾಸಕರ ಸಭೆ ಕರೆದು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಶ್ಲಾಘಿಸುತ್ತೇನೆ. ಹಿಂದಿನ ಮುಖ್ಯಮಂತ್ರಿಗಳಾದ ಬಂಗಾರಪ್ಪ ನವರು ನೀರು ಕೊಡಬೇಕು ಎನ್ನತಕ್ಕ ತೀರ್ಮಾನವನ್ನು ಸಚಿವ ಸಂಪುಟದ ಸಭೆಯಲ್ಲಿ ತೆಗೆದುಕೊಂಡಿದ್ದಾರೆ. ಆದರೆ ಎರಡು ವರ್ಷವಾದರೂ ಸಹ ಇದನ್ನು ಕಾರ್ಯಚರಣೆ ಮಾಡದೇ ಇರಲು ಇರತಕ್ಕ ತೊಂದರೆಗಳೇನು ಎಂಬುದನ್ನುಮಾನ್ಯ ಮಂತ್ರಿಗಳು ಸದನಕ್ಕೆ ತಿಳಿಸಬೇಕು. ಎರಡನೆಯದಾಗಿ ಶ್ರೀ ಬೈರೇಗೌಡರು ಕೇಳಿರತಕ್ಕ ಪ್ರಶ್ನೆಯ ಉದ್ದೇಶ, ಆದರ ಹಿನ್ನೆಲೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕುಡಿಯುವ ನೀರಿನ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಚಾಮರಾಜನಗರವಾಗಲೀ, ಮಾಲೂರುಗಲೀ, ಕೆ.ಜಿ.ಎಫ್‌ಗಲೀ,

ಕೋಲಾರವಾಗಲೀ, ಕುಡಿಯುವ ನೀರಿನ ಪ್ರತಿಯೊಂದು ತೊಟ್ಟು ನೀರನ್ನೂ ಸರಿಯಾಗಿ ಉಪಯೋಗಿಸಿಕೊಳ್ಳುವುದು ಅತಿ ಅವಶ್ಯಕವಾಗಿರುತ್ತದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನೀವು ಈಗ ಕಾವೇರಿ ನಾಲ್ಕನೆಯ ಯೋಜನೆಗೆ ಅಡಿಗಲ್ಲನ್ನು ಹಾಕಿದ್ದೀರಿ. ಬಡ್ಜೆಟ್‌ನಲ್ಲಿ ಒಂದು ರೂಪಾಯಿ ಹಣವನ್ನೂ ಇಟ್ಟಿಲ್ಲ. ಇದರ ಬಗ್ಗೆ ಶೇಷನ್‌ರವರಿಗೆ ತಿಳಿಸುತ್ತೇವೆ, ಅದು ಬೇರೆ ವಿಚಾರ. ಕಾವೇರಿ ನಾಲ್ಕನೇ ಯೋಜನೆಯ ನಕಾಶೆ ತಯಾರು ಮಾಡದೇ ಇದಕ್ಕೆ ಅಡಿಗಲ್ಲನ್ನು ಹಾಕಿದ್ದೀರಿ.

ಶ್ರೀ ಸಿ.ಆರ್ ಅಹ್ಮದ್ :- ಹಿಂದಿನ ಮುಖ್ಯಮಂತ್ರಿಗಳ ಕಾಲದಲ್ಲಿ ಸಚಿವ ಸಂಪುಟದಿಂದ ಇದಕ್ಕೆ ಒಪ್ಪಿಗೆ ದೊರತಿದೆ ಎಂಬ ವಿಚಾರವನ್ನು ವಿರೋಧ ಪಕ್ಷಗಳ ಉಪ ನಾಯಕರು ಹೇಳಿದ್ದಾರೆ. ಇದರ ಬಗ್ಗೆ ನನ್ನ ಹತ್ತಿರ ಸಧ್ಯಕ್ಕೆ ಮಾಹಿತಿ ಇಲ್ಲ. ಆ ಮಾಹಿತಿಯನ್ನು ತರಿಸಿಕೊಂಡು ನಂತರ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಬಗ್ಗೆ ನಿರ್ದಿಷ್ಟವಾಗಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಸಬ್ ಡಿವಿಜನ್ ಮಾಡುವಂಥ ಸಲಹೆಯನ್ನು ಶ್ರೀ ಬೈರೇಗೌಡರು ಮಾಡಿದ್ದಾರೆ. ಇದರ ಜೊತೆಗೆ ಮಾನ್ಯ ವಿರೋಧ ಪಕ್ಷದ ಉಪ-ನಾಯಕರು ಉತ್ತಮವಾಗಿ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಬೇಕಾದರೆ ಶ್ರೀ ಬೈರೈಗೌಡರನ್ನು ಆ ಸಭೆಗೆ ಕರೆಯುತ್ತೇನೆ.

ಶ್ರೀ ಸಿ.ಬೈರೇಗೌಡ :- ಸಭೆಗೆ ನನ್ನನ್ನು ಕರೆಯುವುದು ಬೇಡ. ನಾನು ಏನು ಹೇಳಿದ್ದೇನೆ ಅದಕ್ಕೆ ಉತ್ತರ ಕೊಟ್ಟರೆ ಸಾಕು. ಒಂದು ಸಬ್ ಡಿವಿಜನ್ ಮಾಡಿ, ಇನ್‌ವೆಸ್ಟಗೇಷನ್ ಮಾಡಿಸಿ, ಆಮೇಲೆ ಹಣ ಎಲ್ಲಿಂದ ಬರುತ್ತದೆ ಎಂಬುದನ್ನೆಲ್ಲಾ ಯೋಚನೆ ಮಾಡೋಣ. ವಿವರವಾದ ಅಂದಾಜನ್ನು ತಯಾರು ಮಾಡಿದ ಮೇಲೆ ಇದೆಲ್ಲಾ ಬರುತ್ತದೆ. ಮೊದಲು ಸಬ್ ಡಿವಿಜನ್ ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಇಲಾಖೆಯ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಆ ಕೆಲಸವನ್ನು ಪ್ರಾರಂಭ ಮಾಡಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಕುಡಿಯುವ ನೀರಿನ ಯೋಜನೆ ಹೊಸದಾಗಿ ಪ್ರಾರಂಭ ಮಾಡುತ್ತಿದ್ದೇವೆ ಹಾಗೂ ಕನಕಪುರ, ಹೊಸಕೋಟೆ ಈ ಪ್ರದೇಶಗಳಿಗೆ ನೀರು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ, ಇದರ ಜೊತೆಗೆ ಈಗಾಗಲೇ ಕಾವೇರಿ ನೀರಿನ ಯೋಜನೆ ಅಡಿಯಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಪ್ರಾರಂಭ ಮಾಡಿದ್ದೀರಿ, ಇವೆಲ್ಲಾ ಯೋಜನೆಗಳ ಗತಿ ಏನಾಗಿದೆ? ಅದರಲ್ಲಿ ಚಾಮರಾಜನಗರವು ಇದೆ. ಇದು 90 ರಲ್ಲಿ ಪ್ರಾರಂಭವಾಗಿರುವುದು. ಯಾವ ಕಾಲಕ್ಕೆ ಇದನ್ನು ಮುಗಿಸುತ್ತೀರಾ? ನಿಮ್ಮಲ್ಲಿ ನೂರು ಭಾರಿ ಬಂದಿದ್ದೇನೆ, ಅಷ್ಟೇ ಸಲ ನನಗೆ ಭರವಸೆಯನ್ನು ಕೊಟ್ಟಿದ್ದೀರಿ, ಅಷ್ಟು ಕುರಿತಗೊಂಡಿದೆ. ಅವುಗಳನ್ನು ಯಾವಾಗ ಮುಗಿಸುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ :- ಮಾನ್ಯ ಸದಸ್ಯರು ಚಾಮರಾಜ ನಗರದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಈಗಾಗಲೇ 2-3 ಬಾರಿ ಮಾನ್ಯ

ಸದಸ್ಯರ ಜೊತೆ ಸ್ವತ : ಚರ್ಚೆ ಮಾಡಿದ್ದೇನೆ. ಅದಕ್ಕೆ ಸರ್ಕಾರ ಅನುಮೋದನೆ ದೊರಕಿದೆ ಹಾಗೂ ಕೆಲಸ ಪ್ರಾರಂಭವಾಗಿದೆ. ಕೊಳವೆ ಬಾವಿ ಪೈಪುಗಳು ಸರಬರಾಜು ಆಗುವುದರಲ್ಲಿ ವಿಳಂಬ ಆಗಿರಕ್ಕ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಸದ್ಯದಲ್ಲಿಯೇ ಕೆಲಸ ಮಾಡಬೇಕಾಗಿದೆ ಎನ್ನತಕ್ಕ ವಿಚಾರದಲ್ಲಿಯೂ ಕೂಡ ನಾವು ಚರ್ಚೆ ನಡಸಿದ್ದೇವೆ. ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಉಳಿದಂಥ ವಿಚಾರಗಳ ಬಗ್ಗೆ ಅಂದರೆ ಎಷ್ಟು ಯೋಜನೆಗಳು ಈ ರೀತಿ ಕುರಿತಗೊಂಡಿವೆ ಎಂಬ ಬಗ್ಗೆ ಮಾನ್ಯ ಸದ್ಯಸರು ಪ್ರಸ್ತಾಪ ಮಾಡಿದ್ದಾರೆ. ಈಗ ನನ್ನಲ್ಲಿ ಮಾಹಿತಿ ಇಲ್ಲದಿರುವುದರಿಂದ ಆ ಮಾಹಿತಿಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕುಡಿಯುವ ನೀರಿನ ಯೋಜನೆ ಬಗ್ಗೆ ನಾವು ತ್ವರಿತವಾಗಿ ಕೆಲಸ ಪ್ರಾರಂಭ ಮಾಡುತ್ತೇವೆ. ಹಿಂದಿನ ಶಾಸನ ಸಭೆಯಲ್ಲೂ ಕೂಡ ಇದರ ಬಗ್ಗೆ ಭರವಸೆ ಕೊಟ್ಟಿದ್ದೇವೆ. ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತ್ವರಿತವಾಗಿ ಈ ಕೆಲಸವನ್ನು ಮಾಡುತ್ತೇವೆ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ :- ಶ್ರೀಮತಿ ಮೋಟ್ಟಮ್ಮನವರು ಉತ್ತರ ನೀಡುವುದರಲ್ಲಿ ವಿಳಂಬವಾಗಿದೆ. ಇದಕ್ಕೆ ಕಾರಣವೇನೆಂದರೆ ಬೇರೆ ಬೇರೆಯಾದ ಪುರಸಭೆಗಳಿಂದ ಮಾಹಿತಿಗಳನ್ನು ಸಂಗ್ರಹಿಸಬೇಕಾಗಿದೆ. ಅವುಗಳನ್ನು ಪಡೆಯುವಲ್ಲಿ ವಿಳಂಬವಾಗಿದೆ. ಆದ್ದರಿಂದ ಈ ಪ್ರಶ್ನೆಯನ್ನು ಮುಂದುಡಲಾಗಿತ್ತು. ಇಂದು ಇದಕ್ಕೆ ಉತ್ತರವನ್ನು ನೀಡಬೇಕಾಗಿತ್ತು. ಆದರೆ ಇವತ್ತು ನಾಲ್ಕನೇ ದರ್ಜೆಯ ನೌಕರರ ಮುಷ್ಕರ ಹೂಡಿರುವುದರಿಂದ ಕೆಲವು ಮಾಹಿತಿಗಳನ್ನು ಪಡೆಯಲು ವಿಳಂಬವಾಗಿದೆ. ಆದ್ದರಿಂದ ಮತ್ತೆ ಸ್ವಲ್ಪ ಸಮಯವನ್ನು ನಾನು ಈಗ ಕೇಳುತ್ತಿದ್ದೇನೆ. ಸಾಧ್ಯವಾದರೆ ನಾನು ನೋಮವಾರವೇ ಈ ಪ್ರಶ್ನೆಗೆ ಉತ್ತರ ನೀಡುತ್ತೇನೆ.

ಮುಂದೂಡಲಾದ ಪ್ರಶ್ನೆಗಳು ಪ್ರ ಸಂ.21(281)

ಶ್ರೀಮತಿ ಮೋಟ್ಟಮ್ಮ : ಮಾನ್ಯ ಉಪಾಧ್ಯಕ್ಷರೇ, ಇದು ಆಗುವುದಿಲ್ಲ. ಎರಡನೇಯ ಬಾರಿ ಈ-ಪ್ರಶ್ನೆಯನ್ನು ಮುಂದೂಡಲಾಗುತ್ತಿದೆ. ಇದು ಮುಖ್ಯವಾದ ಪ್ರಶ್ನೆ, ನಮ್ಮ ಶಾಸನಸಭಾ ಅವಧಿಯ ಕೊನೆಯ ಶಾಸನಸಭೆ ಇದು. ಅದಕ್ಕೆ ಬಹು ಮುಖ್ಯವಾದ ಪ್ರಶ್ನೆಗೆ ಉತ್ತರ ಸಿಗದೇ ಇದ್ದರೆ ನಾವು ಶಾಸನಸಭೆಯಲ್ಲಿ ಭಾಗವಹಿಸುವುದಕ್ಕೆ ಅರ್ಥ ಬರುವುದಿಲ್ಲ ಎಂದು ನನಗೆ ಅನಿಸುತ್ತದೆ.

ಅಧ್ಯಕ್ಷರು : ಸೋಮವಾರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಸೋಮವಾರ ಬರುತ್ತದೆ.

ಶ್ರೀಮತಿ ಮೋಟ್ಟಮ್ಮ : ಸೋಮವಾರ ಬರುತ್ತದೋ ಇಲ್ಲವೋ ಗೊತ್ತಿಲ್ಲ.

**ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳು**
(ಸಮಾಜ ಕಲ್ಯಾಣ ಮಂತ್ರಿಗಳು)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ